KARNATAK UNIVERSITY, DHARWAD
M.V.P's MAHANTSWAMY ARTS, SCIENCE & COMMERCE COLLEGE
HAUNSBHAVI- 581 109
Tq: Hirekerur Dist: Haveri
Accredited "B" GradebyNAAC with CGPA 2.14 (College code: KUD 3204)
E-mail: principalmasccollege@gmail.com Cell: 9449570422
NSS Officer: E-mail: rajeevglb@gmail.com Cell: 9686315421

# ರಾಷ್ಟ್ರೀಯ ಸೇವಾಯೋಜನೆಯ ವಾರ್ಷಿಕ ವಿಶೇಷ ಶಿಬಿರದ ವರದಿ 2021-22

ದಿನಾಂಕ **17-02-2022**ರಿಂದ **23-02-2022** ರವರೆಗೆ ಮಹಾವಿದ್ಯಾಲಯದ ದತ್ತು ಗ್ರಾಮ ಮತ್ತಿಹಳ್ಳಿ ಗ್ರಾಮದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ವಾರ್ಷಿಕ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.ಈ ಶಿಬಿರ ನಿರಂತರ ಏಳು ದಿನಗಳ ಕಾಲ ನಡೆಯಿತು.ಅದರ ಸಂಕ್ಷಿಪ್ತ ವರದಿ ಈ ಕೆಳಗಿನಂತಿದೆ.

ದಿನಾಂಕ **17-02-2022ರಂದು ಮಧ್ಯಾಹ್ನ 12.30** ಗಂಟೆಗೆ ಮಹಾವಿದ್ಯಾಲಯದ ದತ್ತು ಗ್ರಾಮವಾದ ಮತ್ತಿಹಳ್ಳಿ ಗ್ರಾಮಕ್ಕೆ ತಲುಪಿದೆವು.ನಂತರ ನಾವುಸ್ವಯಂಸೇವಕರನ್ನು ಐದು ತಂಡಗಳಾಗಿ ವಿಭಾಗಿಸಿ, ಅವುಗಳಿಗೆ ಒಂದೊಂದು ಹೆಸರನ್ನು ನೀಡಲಾಯಿತು. ತಕ್ಷಣ ಕಾರ್ಯಪ್ರವೃತ್ತರಾದ ನಾವು ಸಾಯಂಕಾಲದ ಉದ್ಘಾಟನಾ ಸಮಾರಂಭದ ವೇದಿಕೆಯನ್ನು ಸಿದ್ದಪಡಿಸಿದೇವು. ನಂತರ ಸಂಜೆ 6 ಗಂಟೆಗೆ ಮೃತ್ಯುಂಜಯ ವಿದ್ಯಾಪೀಠದ ಕಾರ್ಯಾದ್ಯಕ್ಷರಾದ ಶ್ರೀ ಪಿ.ವ್ಹಿ.ಕೆರೂಡಿಯವರ ಅಧ್ಯಕ್ಷತೆಯಲ್ಲಿ ಶಿಬಿರದ ಉದ್ಘಾಟನಾ ಸಮಾರಂಭ ನೆರವೇರಿತು.ಶ್ರೀ ಪ್ರಭಣ್ಣ ಬಳಗಾನೂರ ರವರು ಸಸಿಗೆ ನೀರೆರೆಯುವುದರ ಮೂಲಕ ಶಿಬಿರವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಮೃತ್ಯುಂಜಯ ವಿದ್ಯಾ ಪೀಠದ ಗೌರವಾನ್ವಿತ ಸದಸ್ಯರು ಹಾಗೂ ನಮ್ಮೆಲ್ಲರ ನೆಚ್ಚಿನ ಮಾರ್ಗದರ್ಶಕರೂ ಆದ ಶ್ರೀ ಎನ್.ಸಿ. ಅಕ್ಕಿ, ಗೌರವಾನ್ವಿತ ಸದಸ್ಯರಾದ ಶ್ರೀ ಲಿಂಗರಾಜ ಎಲಿ, ಶ್ರೀ ಎಸ್.ವ್ಹಿ.ಪಾಟೀಲ, ಮತ್ತಿಹಳ್ಳಿ ಗ್ರಾಮದ ಗ್ರಾಮ ಪಂಚಾಯತ ಸದಸ್ಯರಾದ ಶ್ರೀ ಪ್ರಭುಗೌಡ ಪಾಟೀಲ್ ಹಾಗೂ ಶೀಮತಿ ಸಂಗೀತಾ ಎನ್.ಚಲವಾದಿ ಹಾಗೂ ಮಹಾವಿದ್ಯಾಲಯದ ಪ್ರಾಚಾರ್ಯರಾದ ಶ್ರೀ ಎಸ್.ಎ.ತಿಪ್ಪೇಶ್ ಅವರು ಮತ್ತು ಹಂಸಭಾವಿ ಹಾಗೂ ಮತ್ತಿಹಳ್ಳಿ ಗ್ರಾಮದ ಗಣ್ಯ ನಾಗರಿಕರು ಭಾಗವಹಿಸಿದ್ದರು.

ದಿನಾಂಕ **18-02-2022**ರ ಶುಕ್ರವಾರದಂದು ಮುಂಜಾನೆ 6ಗಂಟೆಗೆ 'ಕಾವೇರಿ' ತಂಡದವರು ಸ.ಕಿ.ಪ್ರಾ. ಶಾಲೆಯ ಆವರಣದಲ್ಲಿ ಧ್ವಜಾರೋಹಣವನ್ನು ನೆರವೇರಿಸಿದರು. ನಂತರ ಶ್ರಮದಾನದಲ್ಲಿ ತೊಡಗಿ ಮತ್ತಿಹಳ್ಳಿ ಗ್ರಾಮದ ಚರಂಡಿಸ್ವಚ್ಛಗೊಳಿಸುವ ಕಾರ್ಯವನ್ನು ಮಾಡಲಾಯಿತು. ಸಂಜೆ 6ಗಂಟೆಗೆ ವೇದಿಕೆಯ ಕಾರ್ಯಕ್ರಮದ ಜವಾಬ್ದಾರಿಯನ್ನು 'ಗಂಗಾ' ತಂಡದವರು ವಹಿಸಿಕೊಂಡಿದ್ದರು. ಅಂದು *"ಸುಸ್ಥಿರ ಕೃಷಿ ಬಾಳಿಗೆ ಖುಷಿ"* ಎಂಬ ವಿಷಯ ಕುರಿತು ಕು.ಉಮಾ ಬ್ಯಾಡಗಿ, ಕೃಷಿ ಅಧಿಕಾರಿಗಳು, ಹಂಸಭಾವಿ, ಶ್ರೀಮತಿ ಬಸವ್ವ ಹಮ್ಮಿಣಿ, ಶ್ರೀಮತಿ ಪಲ್ಲವಿ ಬೋಳಕಟ್ಟಿ, ಲೆಫ್ಟಿನೆಂಟ್ ಹುಸೇನಸಾಬ್ ಸಿ.ಕಳಗೊಂಡ ಹಾಗೂ ಶ್ರೀ ಸಂತೋಷ್ ಸಿ, ವಿಶೇಷ ಉಪನ್ಯಾಸವನ್ನು ನೀಡಿದರು. ಡಾ.ಕೆ.ವಿ.ಜಯಪ್ಪ ಅವರ ಅಧ್ಯಕ್ಷತೆಯಲ್ಲಿ ಈ ಕಾರ್ಯಕ್ರಮ ಜರುಗಿತು. ವೇದಿಕೆಯ ಕಾರ್ಯಕ್ರಮದ ನಂತರ ಸ್ವಯಂ ಸೇವಕರು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ನಾಗರಿಕರಿಗೆ ಮನೋರಂಜನೆಯ ಜೊತೆಗೆ ನೈತಿಕ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಊರ ಹಿರಿಯರಾದ ಶ್ರೀಮತಿ ಗಿರಿಜವ್ವ ಸಣ್ಣರಾಗಿಕೊಪ್ಪ, ಶ್ರೀಚಂದ್ರಪ್ಪ ಸುಣ್ಣದಕೊಪ್ಪ, ಶ್ರೀ ಅಡವಯ್ಯ ಹಿರೇಮಠ ಮುಂತಾದವರು ಉಪಸ್ಥಿತರಿದ್ದರು.

ದಿನಾಂಕ **19-02-2022**ರಂದು 'ಯಮುನಾ' ತಂಡದವರಿಂದ ಬೆಳಿಗ್ಗೆ 6ಗಂಟೆಗೆ ಧ್ವಜಾರೋಹಣ ಕಾರ್ಯಕ್ರಮ ನೆರವೇರಿತು. ನಂತರ ಮುಂಜಾನೆ 9ಗಂಟೆಗೆ ಎಲ್ಲ ಸ್ವಯಂ ಸೇವಕರು ಊರಿನ ಚರಂಡಿ ಸ್ವಚ್ಛಗೊಳಿಸುವ ಕಾರ್ಯವನ್ನು ಈ ದಿನವೂ ಮುಂದುವೆಸಿದರು. ಸಾಯಂಕಾಲ 6ಗಂಟೆಗೆ 'ಕೃಷ್ಣಾ' ತಂಡದವರು ವೇದಿಕೆಯ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಡಾ.ಎಂ.ಎಂ.ಅಕ್ಕಿಇವರ ಅಧ್ಯಕ್ಷತೆಯಲ್ಲಿ ಜರುಗಿದ ಈ ಕಾರ್ಯಕ್ರಮದಲ್ಲಿ *"ಯುವಕರಲ್ಲಿ ಆರೋಗ್ಯದ ಜಾಗೃತಿ"* ಎಂಬ ವಿಷಯದ ಕುರಿತು ಡಾ.ಎನ್.ಚೇತನಕುಮಾರ, ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಹಂಸಭಾವಿ ಇವರು ವಿಶೇಷ ಉಪನ್ಯಾಸ ನೀಡಿದರು. ನಮ್ಮ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ವಿ.ಎಸ್.ಧಾನೇನವರ, ಶ್ರೀ ಪಿ.ವೆಂಕಟೇಶ್, ಡಾ.ಎಂ.ವ್ಹಾಯ್.ಕುಂಬಾರ, ಶ್ರೀ ನಿಂಗಪ್ಪ ಕುಡುಪಲಿ, ಶ್ರೀ ಚನ್ನಬಸಪ್ಪಾ ತಳವಾರ, ಶ್ರೀ ಪ್ರವೀಣ ಅಂಗಡಿ ಉಪನ್ಯಾಸ ನೀಡಿದರು ಸಹಾಗೂ ಊರ ಹಿರಿಯರಾದ ಶ್ರೀ ಪ್ರಕಾಶ ಬತ್ತಿಕೊಪ್ಪ, ಶ್ರೀ ನಾಗೇಶಪ್ಪ ದೈವಜ್ಞ, ಮುಂತಾದವರು ಭಾಗವಹಿಸಿದ್ದರು. ನಂತರ ಶಿಬಿರಾರ್ಥಿಗಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದವು.

ದಿನಾಂಕ **20-02-2022**ರಂದು ಮುಂಜಾನೆ 'ಮಲಪ್ರಭಾ' ತಂಡದವರಿಂದ ಧ್ವಜಾರೋಹಣ ಕಾರ್ಯಕ್ರಮ ನೆರವೇರಿತು. ನಂತರ ಶಿಬಿರಾರ್ಥಿಗಳು ಗ್ರಾಮದ ರಸ್ತೆ ಸ್ವಚ್ಛತೆಗೆ ಶ್ರಮದಾನ ಮಾಡಿದರು. ಸಂಜೆ 6ಗಂಟೆಗೆ 'ಕಾವೇರಿ'ತಂಡದವರು ವೇದಿಕೆಯ ಕಾರ್ಯಕ್ರಮ ನಡೆಸಿಕೊಟ್ಟರು. ಡಾ.ರವಿ ಎಸ್.ನಾಯಕ ಅವರ ಅಧ್ಯಕ್ಷತೆಯಲ್ಲಿ *"ಗ್ರಾಮೀಣ ಯುವಜನತೆಯ ಜವಾಬ್ದಾರಿಗಳು ಮತ್ತು ಅವಕಾಶಗಳು"* ಎಂಬ ವಿಷಯದ ಕುರಿತು ಶ್ರೀ ನವೀನ ಎಂ.ಸಹಾಯಕ ಪ್ರಾಧ್ಯಾಪಕರು ಜಿ.ಎಫ್.ಜಿ.ಸಿ.ಹಿರೇಕೆರೂರು ಇವರು ವಿಶೇಷ ಉಪನ್ಯಾಸ ನೀಡಿದರು. ಈ ಸಂದರ್ಭದಲ್ಲಿ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ.ಲೋಕೇಶ್ ಬಿ, ಶ್ರೀ ಹಾಲೇಶ್ ಲಮಾಣಿ, ಶ್ರೀ ಮಲ್ಲಿಕಾರ್ಜುನ ಕಲ್ಲತ್ತಿ, ಶ್ರೀ ಚಂದ್ರಶೇಖರ ರೆಡ್ಡಿ, ಶ್ರೀ ಪಿ.ಎಸ್.ಕುಲಕರ್ಣಿ, ಶ್ರೀ ಪ್ರಕಾಶ ಮಾಹಾಜನ ಶೆಟ್ಟರ್ ಹಾಗೂ ಊರ ಹಿರಿಯರಾದ ಶ್ರೀ ಹೂವಪ್ಪ ರಾಗಿಕೊಪ್ಪ, ಶ್ರೀ ಭೀಮಪ್ಪ ದೀಪಿಗಿಹಳ್ಳಿ, ಶ್ರೀ ಸೋಮರಾಜ ಚಲವಾದಿ ಮುಂತಾದವರು ಭಾಗವಹಿಸಿದ್ದರು. ನಂತರ ಪ್ರಾಥಮಿಕ ಶಾಲಾ ಮಕ್ಕಳ ಜೊತೆಗೂಡಿ ಶಿಬಿರಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮನ್ನು ನಡೆಸಿಕೊಟ್ಟರು.

ದಿನಾಂಕ **21-02-2022**ರಂದು ಮುಂಜಾನೆ "ಗಂಗಾ"ತಂಡದವರಿಂದ ಧ್ವಜಾರೋಹಣ ಕಾರ್ಯಕ್ರಮ ನೆರವೇರಿತು. ತದನಂತರ ಶಾಲೆಯ ಆವರಣವನ್ನು ಸ್ವಚ್ಚಗೊಳಿಸಲಾಯಿತು. ನಂತರ ಸಂಜೆ 6ಗಂಟೆಗೆ "ಯಮುನಾ" ತಂಡದವರು ವೇದಿಕೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಶ್ರೀ ಸಂದೀಪ ಕುಲಕರ್ಣಿ ಇವರ ಅಧ್ಯಕ್ಷತೆಯಲ್ಲಿ *"ಯುವಕರಲ್ಲಿ ಉಳಿತಾಯ ಪ್ರವೃತ್ತಿ"* ಎಂಬ ವಿಷಯದ ಕುರಿತು ಶ್ರೀ ಜೆ.ಬಿ. ಕುಲಕರ್ಣಿ ಹಿರಿಯ ವ್ಯವಸ್ಥಾಪಕರು, ಕೆ.ವಿ.ಜಿ.ಬ್ಯಾಂಕ್, ಹಂಸಭಾವಿ ಇವರು ಸದರಿ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು. ಈ ಸಂದರ್ಭದಲ್ಲಿ ಮಹಾವಿದ್ಯಾಲಯದ ಗ್ರಂಥಪಾಲಕರಾದ ಡಾ.ಕೊಟೆಪ್ಪ ಬಿ, ಪ್ರಜಾವಾಣಿಯ ವರದಿಗಾರರಾದ ಶ್ರೀ ರಾಜೇಂದ್ರ ನಾಯಕ ಹಾಗೂ ಗ್ರಾಮದ ಹಿರಿಯರಾದ ಶ್ರೀ ನಿಂಗಪ್ಪ ಅಸುಂಡಿ, ಶ್ರೀ ಮಲೇಶಪ್ಪ ಸಂಗಣ್ಣನವರ, ಶ್ರೀ ಪರಸಪ್ಪ ಯಲವದಹಳ್ಳಿ ಮುಂತಾದವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ನಂತರ ಶಿಬಿರಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ದಿನಾಂಕ **22-02-2022**ರಂದು ಮುಂಜಾನೆ 6ಗಂಟೆಗೆ ಧ್ವಜಾರೋಹಣ ಕಾರ್ಯಕ್ರಮವನ್ನು'ಕೃಷ್ಣಾ' ತಂಡದವರು ನಡೆಸಿಕೊಟ್ಟರು. ಮುಂಜಾನೆ 9ಗಂಟೆಗೆ ಸರಿಯಾಗಿ ಗ್ರಾಮದ ಚರಂಡಿಯಿಂದ ಹೊರತೆಗೆದ ಕಸವನ್ನು ಟ್ರ್ಯಾಕ್ಟರ ಮೂಲಕ ವಿಲೇವಾರಿ ಮಾಡುವ ಕಾರ್ಯದಲ್ಲಿ ಸ್ವಯಂ ಸೇವಕರು ತೊಡಗಿಕೊಂಡರು. ಸಾಯಂಕಾಲ 4ಗಂಟೆಗೆ *"ಐತಿಹಾಸಿಕ ಸ್ಮಾರಕಗಳನ್ನು ಉಳಿಸಿ"* ಎನ್ನುವ ಜಾಥಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಂಜೆ 6ಗಂಟೆಗೆ ಡಾ.ಎಂ.ಎಂ.ಅಕ್ಕಿ ಅವರ ಅಧ್ಯಕ್ಷತೆಯಲ್ಲಿ *'ಕಾನೂನು ಅರಿವು'*ಎಂಬ ವಿಷಯದ ಕುರಿತು ಡಾ.ವ್ಹಾಯ್.ಕೆ.ವಿರೂಪಾಕ್ಷಪ್ಪ ಇವರು ವಿಶೇಷ ಉಪನ್ಯಾಸ ನೀಡಿದರು. ಶ್ರೀ ದೀಪಕ್ ಸಿಂದೆ, ಶ್ರೀ ಎಂ.ಜಿ.ಬಂಡಿವಡ್ಡರ ಶ್ರೀ ವಾಯ್.ಕೆ. ದೊಡ್ಡಮಾಸ್ತಿ ಇವರುಗಳು ಮಾತನಾಡಿದರು. ಈ ಸಂದರ್ಭದಲ್ಲಿ ಗ್ರಾಮದ ಹಿರಿಯರಾದ ಶ್ರೀ ಭರಮಗೌಡ್ರ ಬಡೇಗೊಂಡ್ರ, ಶ್ರೀ ಪರಮೇಶಪ್ಪ ಕ್ವಾಲಿಹಳ್ಳಿ, ಶ್ರೀಚಂದ್ರಪ್ಪ ಬತ್ತಿಕೊಪ್ಪ ಮುಂತಾದವರು ಉಪಸ್ಥಿತರಿದ್ದರು. ನಂತರ ಶಿಬಿರಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದವು.

ದಿನಾಂಕ **23-02-2022**ರಂದು ಮುಂಜಾನೆ 'ಕಾವೇರಿ' ತಂಡದವರು ಧ್ವಜಾರೋಹಣ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ನಂತರ ಗ್ರಾಮದ ಆರಾಧ್ಯದೈವ ಸೋಮೇಶ್ವರ ದೇವಸ್ಥಾನದ ಪ್ರಾಂಗಣವನ್ನು ಸ್ವಚ್ಚಗೊಳಿಸಲಾಯಿತು. ಮಧ್ಯಾಹ್ನ 3ಗಂಟೆಗೆ ಶಿಬಿರದ ಮುಕ್ತಾಯ ಸಮಾರಂಭ ನೆರವೇರಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ನಮ್ಮ ಮಹಾವಿದ್ಯಾಲಯದ ಪ್ರಾಚಾರ್ಯರಾದ ಶ್ರೀ ಎಸ್.ಎ.ತಿಪ್ಪೇಶ್ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪಿ.ಜಿ.ಕಟ್ಟಿಮನಿ, ಮುಖ್ಯ ಗುರುಗಳು ಸ.ಕಿ.ಪ್ರಾ.ಶಾಲೆ, ಮತ್ತಿಹಳ್ಳಿ ಹಾಗೂ ಅದೇ ಶಾಲೆಯ ಸಹಶಿಕ್ಷರಾದ ಶ್ರೀ ಜಗದೀಶ್ ಬಂಡೇರ, ಶ್ರೀಮತಿ ಮಂಜುಳಾ ಎಸ್.ಕೆ.ಗ್ರಾಮದ ಗ್ರಾಮಪಂಚಾಯತ ಸದಸ್ಯರಾದ ಶ್ರೀ ಪ್ರಭುಗೌಡ ಪಾಟೀಲ್, ಶ್ರೀಮತಿ ಗೀತಾ ಎನ್. ಚಲವಾದಿ ಮುಂತಾದವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ನಮ್ಮ ಮಹಾವಿದ್ಯಾಲಯದ ಪ್ರಾಚಾರ್ಯರಾದ ಶ್ರೀ ಎಸ್.ಎ.ತಿಪ್ಪೇಶ್ ಅವರು ಮತ್ತಿಹಳ್ಳಿ ಗ್ರಾಮದ ಆರಾಧ್ಯದೈವ ಸೋಮೇಶ್ವರ ದೇವಾಲಯಕ್ಕೆ ಎರಡು ಕಸದ ಬುಟ್ಟಿ(ಡಸ್ಟಬಿನ್)ಗಳನ್ನು ನೀಡಿದರು ಹಾಗೂ ಮಹಾವಿದ್ಯಾಲಯದ ವತಿಯಿಂದ ಹಾಲು ಉತ್ಪಾದಕ ಸಂಘಕ್ಕೆ ಪ್ರಜಾವಾಣಿ ಪತ್ರಿಕೆಯನ್ನು ಮೂರು ವರ್ಷದ ಚಂದಾ ಹಣ ಸಮೇತ ದಾನ ನೀಡಿದರು. ಗ್ರಾಮದ ವತಿಯಿಂದ ಎನ್.ಎಸ್.ಎಸ್. ಕಾರ್ಯಕ್ರಮ ಅಧಿಕಾರಿ ಮತ್ತು ಶಿಬಿರದ ಸಹಅಧಿಕಾರಿಗಳನ್ನು ಸನ್ಮಾನಿಸಿ ಬೀಳ್ಕೊಡಲಾಯಿತು.

ಧನ್ಯವಾದಗಳು

**ದಿನಾಂಕ: 23-02-2022**

**ಸ್ಥಳ: ಮತ್ತಿಹಳ್ಳಿ**

# ವಾರ್ಷಿಕ ಶಿಬಿರದ ಭಾವಚಿತ್ರಗಳು

College Haveri









Latitude 14.551473
Longitude 75.346534
Elevation 604.24±3 m
Accuracy 8.1 m
Time 02-19-2022 21:04
Note NSS ANNUAL CAMP-2021
Powered by NoteCam


GPS Map Camera
Mattihalli, Karnataka, India
H83W+6RH, Mattihalli, Karnataka 581109, India
Lat 14.551382°
Long 75.347356°
19/02/22 10:23 AM


GPS Map Camera
Mattihalli, Karnataka, India
H83W+6RH, Mattihalli, Karnataka 581109, India
Lat 14.551382°
Long 75.347356°
19/02/22 06:38 AM


GPS Map Camera
Mattihalli, Karnataka, India
H83W+6RH, Mattihalli, Karnataka 581109, India
Lat 14.551382°
Long 75.347356°
20/02/22 09:56 AM


GPS Map Camera
Mattihalli, Karnataka, India
H83W+6RH, Mattihalli, Karnataka 581109, India
Lat 14.552814°
Long 75.34727°
21/02/22 06:53 AM


GPS Map Camera
Mattihalli, Karnataka, India
H83W+6RH, Mattihalli, Karnataka 581109, India
Lat 14.551382°
Long 75.347356°
21/02/22 09:50 PM

M.V.P.S. MASC College * Haunsbhavi 581109 * Dt. Haveri







